**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 1048/2022**

| | | | |
|---|---|---|---|
| **ಹೆಸರು** | : | **ತಿಪ್ಪಣ್ಣ** | ಚಾ.ಸಾ. 2 |
| **ತಂದೆಯ ಹೆಸರು** | : | **ನಾಗಪ್ಪ** | ಪ್ರಾ.ಸಾ. 3 |
| **ವಯಸ್ಸು** | : | **60 ವರ್ಷ** | ದಿನಾಂಕಃ 04-02-2025 |
| **ಉದ್ಯೋಗ** | : | **ಕೂಲಿಕೆಲಸ** | |
| **ವಾಸಸ್ಥಳ** | : | **ತೆಗಲತಿಪ್ಪಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಪ್ರಾಸಾ 2 ನನ್ನ ಸಂಬಂಧಿಕರು. ಚಾಸಾ 4 ಮತ್ತು 5 ರವರು ನಮ್ಮ ಊರಿನವರು. ಚಾಸಾ 7 ಮತ್ತು 8 ರವರು ಒಂದೇ ಓಣಿಯವರು. ಚಾಸಾ 9 ರವರು ನನ್ನ ಮಗ. ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿ ನಮ್ಮ ಊರಿನವನು. ಮೃತ ನಾಗಪ್ಪ ನನ್ನ ಸಂಬಂಧಿಕ.

ಈಗ 2 ವರ್ಷಗಳ ಹಿಂದೆ ನಾನು ಗಡಿಕೇಶ್ವರ-ತೆಗಲತಿಪ್ಪಿ ರಸ್ತೆಯಿಂದ ನಮ್ಮ ಹೊಲಕ್ಕೆ ಹೋಗುತ್ತಿರುವಾಗ ಗಡಿಕೇಶ್ವರ ಹತಿರ ಬಹಳಷ್ಟು ಜನರು ಸೇರಿದ್ದರು. ಅಲ್ಲಿ ಜನರು ನಾಗಪ್ಪ ಮೃತಪಟ್ಟಿದ್ದನು ನೋಡಿಕೊಂಡು ನಿಂತಿದ್ದರು.

ಈಗ ನೋಡುತ್ತಿರುವ ನಿಪಿ 2 ರ ಭಾವಚಿತ್ರದಲ್ಲಿ ನಾನು ಇದ್ದೇನೆ. ನಿಪಿ 2 ರ ಭಾವಚಿತ್ರವನ್ನು ಪಂಚನಾಮೆಯ ಕಾರಣ ಪಡೆದಿದ್ದಾರೆ. ಯಾವ ಕಾರಣಕ್ಕಾಗಿ ಸದರಿ ಭಾವಚಿತ್ರವನ್ನು ಪಡೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಮೃತ ನಾಗಪ್ಪ ಹೇಗೆ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಿಂಚೋಳಿ ಸರಕಾರಿ ಆಸ್ಪತ್ರೆಯಲ್ಲಿ ನಾಗಪ್ಪನ ಶವವನ್ನು ನೋಡಿದ್ದೇನೆ. ಈಗ ನೋಡುತ್ತಿರುವ ನಿಪಿ 3 ರ ಭಾವಚಿತ್ರದಲ್ಲಿ ನಾನು ಇದೇನೆ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**<u>ಮುಂದಿನ ಮುಖ್ಯವಿಚಾರಣೆಗೆ ಸಮಯ ಕೋರಿದರಿಂದ ಸಮಯ ನೀಡಲಾಯಿತು.</u>**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**